ಸಾಕ್ಷಾತ್ ಸುದ್ದಿ

# ಮಹಿಳಾ ಸಬಲೀಕರಣ ಪ್ರತಿಪಾದಿಸಿದ ಕಿರಣ್ ಬೇಡಿ



**ಬೆಂಗಳೂರು:** 5ನೇ ವಿಶ್ವ ಮಹಿಳಾ ಕಾಂಗ್ರೆಸ್ ಸಮಾವೇಶ ನಗರದ ಭಾರತೀಯ ವಿಜ್ಞಾನ ಸಂಸ್ಥೆ (ಐಐಎಸ್ಸಿ) ಜೆ.ಎನ್. ಟಾಟಾ ಆಡಿಟೋರಿಯಂನಲ್ಲಿ ಭಾನುವಾರ ನಡೆಯಿತು.

ಕಾರ್ಯಕ್ರಮದಲ್ಲಿ ಮಾತನಾಡಿದ ಪುದುಚೇರಿ ಲೆಫ್ಟಿನೆಂಟ್ ಗೌರ್ನರ್ ಡಾ. ಕಿರಣ್ ಬೇಡಿ, 'ಎಲ್ಲಾ ರಂಗಗಳಲ್ಲೂ ಮಹಿಳೆಯರು ದಿಟ್ಟತನದಿಂದ ಸಾಧನೆ ಮಾಡಬೇಕು. ಮಹಿಳಾ ಸಬಲೀಕರಣ ಕಾಗದದ ಮೇಲಿದ್ದರೆ ಸಾಲದು, ಕಾರ್ಯರೂಪಕ್ಕೆ ತರುವ ಕೆಲಸವಾಗಬೇಕು' ಎಂದರು.

'ಯಾವ ಪುರುಷನಿಗಿಂತ ಮಹಿಳೆಯರು ಕಡಿಮೆಯಿಲ್ಲ. ನಾನು ಪೊಲೀಸ್ ಇಲಾಖೆಗೆ ಬರಲು ನನ್ನ ಫಿಟ್ನೆಸ್ ಕಾರಣ. ಹಲವು ಬಾರಿ ನಾವು ಎಲ್ಲೋ ಹೋಗಬೇಕು ಅಂದುಕೊಳ್ತೀವಿ. ಆದರೆ ಆ ದಾರಿಗೆ ಹೋಗುವುದಿಲ್ಲ. ನನ್ನ ಜೀವನವೇ ನನಗೆ ಮಾದರಿ. ಪೊಲೀಸ್ ಇಲಾಖೆಗೆ ಪುರುಷರಿಗೆ ಟ್ರೇನಿಂಗ್ ನೀಡಲಾಗುತ್ತೆ. ಆದರೆ ಮಹಿಳೆಯರು ಹುಟ್ಟಿದಾಗಿನಿಂದಲೇ ಸಬಲರು. 23 ನೇ ವಯಸ್ಸಿನಲ್ಲಿ ಎಸ್ಪಿಯಾಗಿದ್ದೆ. ನಾನು ಬೆಳಗ್ಗೆ ಪೊಲೀಸ್ ಠಾಣೆಗೆ ಹೋಗಿ ಪರ್ಸನಲ್ ಫಿಟ್ನೆಸ್ ಹಾಗೂ ಮೆಂಟಲ್ ಫಿಟ್ನೆಸ್‌ಗೆ ಆದ್ಯತೆ ಕೊಡುತ್ತಿದ್ದೆ. ನಾನು ನನ್ನ ಠಾಣೆಯಲ್ಲಿರುತ್ತಿದ್ದ ವೇಳೆ ಸಿಬ್ಬಂದಿಯಿಂದ ತುಂಬಾ ಕಲಿಯುತ್ತಿದ್ದೆ. ನಾವು ಮೊದಲು ಒಳ್ಳೆಯ ನಾಗರಿಕರಾಗಬೇಕು. ಐಪಿಎಸ್ ಅನ್ನೋದು ಜನರಿಗೆ ಸಹಾಯ ಮಾಡುವ ಸರ್ವೀಸ್, ಈ ಕ್ಷೇತ್ರದಲ್ಲಿ ಎಲ್ಲಾ ಮಹಿಳೆಯರು ಮುಂದೆ ಬರಬೇಕೆಂದು ಕಿವಿಮಾತು ಹೇಳಿದರು.

ಬಳಿಕ ಮೈಸೂರು ರಾಣಿ ಪ್ರಮೋದಾದೇವಿ ಮಾತನಾಡಿ, ಮಹಿಳಾ ಸಬಲೀಕರಣವನ್ನು ಬೇರೆ ಬೇರೆ ರೀತಿ ವರ್ಣಿಸಬಹುದು. ಸಂಸ್ಕೃತಿಯ ಜೊತೆ ಜೊತೆಗೆ ಕೆಲ ವಿಷಯಗಳನ್ನ ಉಳಿಸುವ ಜವಾಬ್ದಾರಿ ಮಹಿಳೆಯರದ್ದು. ಎಲ್ಲಾ ಕ್ಷೇತ್ರಗಳಲ್ಲಿ ಮಹಿಳೆಯರಿಗೆ ಆದ್ಯತೆ ನೀಡಬೇಕು. ಹಾಗೆಯೇ ಮಹಿಳೆಯರು ಆರೋಗ್ಯದ ಕಡೆ ಗಮನಹರಿಸಬೇಕು ಎಂದು ಸಲಹೆ ನೀಡಿದರು. ಕಾರ್ಯಕ್ರಮದಲ್ಲಿ ಐಪಿಎಸ್ ಅಧಿಕಾರಿಗಳಾದ ಡಾ. ರಶ್ಮಿ ಕೃಷ್ಣನ್, ಡಾ. ಕಲ್ಪನಾ ಗೋಪಾಲನ್, ಡಾ ಸೌಮ್ಯ ಮಿಶ್ರಾ, ಬಯೋ ಬ್ಯುಸಿನೆಸ್ ಕ್ಲಸ್ಟರ್‌ನ ಅಧ್ಯಕ್ಷ ಡಾ. ವಿ.ಪಿ. ರಾವ್, ವಿಶ್ವ ಮಹಿಳಾ ಸಮಾವೇಶ ಅಧ್ಯಕ್ಷೆ ಡಾ. ಕಾಮಿನಿ ಎ. ರಾವ್, ಡಾ. ಪದ್ಮಿನಿ ಪ್ರಸಾದ್ ಅವರು ಪಾಲ್ಗೊಂಡಿದ್ದರು.